**Akashvani : Bangalore**
**National Bulletin In Kannada**
**24.11.2024 / 19.35 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**24.11.2024 / 19.35 hrs**

**<><*<><>*><>**

**<u>ಮುಖ್ಯಾಂಶಗಳು</u>**

**೧. ವಿಧಾನಸಭಾ ಚುನಾವಣೆ ಫಲಿತಾಂಶ; ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಮುನ್ನಡೆ- ಜಾರ್ಖಂಡ್‌ನಲ್ಲಿ ಜೆಎಂಎಂ ನೇತೃತ್ವದ ಐಎನ್‌ಡಿಐಎ ಗೆ ಮೇಲುಗೈ**

**೨. ಆಕಾಶವಾಣಿ ಜನಪ್ರಿಯ ಕಾರ್ಯಕ್ರಮ 'ಮನ್ ಕಿ ಬಾತ್' ನಲ್ಲಿ ನಾಳೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಮನದಾಳದ ಮಾತು**

**೩. ಸಂಸತ್ತಿನ ಚಳಿಗಾಲದ ಅಧಿವೇಶನ; ನಾಳೆ ಸರ್ವಪಕ್ಷ ಸಭೆ**

**೪. ಸಹಕಾರಿ ರಂಗದ ಮೂಲಕ ರೈತರ ಜೀವನ ಗುಣಮಟ್ಟ ಸುಧಾರಿಸಲು ಕೇಂದ್ರ ಸರ್ಕಾರ ಬದ್ಧ - ಸಚಿವ ಅಮಿತ್ ಶಾ**

**೫. ವಿಶ್ವ ಮಿಲಿಟರಿ ಕುಸ್ತಿ ಪಂದ್ಯಾವಳಿಯಲ್ಲಿ ಭಾರತಕ್ಕೆ ಏಳು ಪದಕ**

**<><*<><>*><>**

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಭರ್ಜರಿ ಮುನ್ನಡೆ ಸಾಧಿಸಿದೆ. ಜಾರ್ಖಂಡ್‌ನಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ ನೇತೃತ್ವದ ಐಎನ್‌ಡಿಐಎ ಬ್ಲಾಕ್ ಮೇಲುಗೈ ಸಾಧಿಸಿದೆ. ಮಹಾರಾಷ್ಟ್ರದಲ್ಲಿ ಒಟ್ಟು ೨೮೮ ಸ್ಥಾನಗಳ ಪೈಕಿ ಬಿಜೆಪಿ ೯೮ ಸ್ಥಾನಗಳಲ್ಲಿ ಜಯ ಗಳಿಸಿದೆ. ೩೫ ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದೆ. ಏಕನಾಥ್ ಶಿಂಧೆ ನೇತೃತ್ವದ ಶಿವಸೇನಾ ೪೬ ಸ್ಥಾನಗಳನ್ನು ಗೆದ್ದುಕೊಂಡಿದೆ. ೧೧ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ೩೬ ಕ್ಷೇತ್ರಗಳಲ್ಲಿ ಜಯಗಳಿಸಿದ್ದು, ೫ ಸ್ಥಾನಗಳಲ್ಲಿ ಮುನ್ನಡೆಯಲ್ಲಿದೆ. ಕಾಂಗ್ರೆಸ್ ೧೦ ಕ್ಷೇತ್ರಗಳಲ್ಲಿ ಗೆಲುವು ಗಳಿಸಿದ್ದು, ೫ ಸ್ಥಾನಗಳಲ್ಲಿ ಮುಂದಿದೆ. ಎನ್‌ಸಿಪಿ ಶರತ್ ಪವಾರ್ ಬಣ ೯ ಸ್ಥಾನ ಪಡೆದಿದ್ದು, ೧ ರಲ್ಲಿ ಮುನ್ನಡೆಯಲ್ಲಿದೆ. ಶಿವಸೇನಾ ಯುಬಿಟಿ ೧೮ ಕ್ಷೇತ್ರಗಳಲ್ಲಿ ಜಯ ಸಾಧಿಸಿ ೨ ರಲ್ಲಿ ಮುಂದಿದೆ. ಬಿಜೆಪಿಯ ರಾಹುಲ್ ನಾರ್ವೇಕರ್ ನಿತೇಶ್ ನಾರಾಯಣ್ ರಾಣೆ, ಮನೀಶ್ ಚೌಧರಿ ಮತ್ತು ಅತುಲ್ ಬಾತಲ್ಕರ್ ಗೆಲುವು ಸಾಧಿಸಿದ ಪ್ರಮುಖರಲ್ಲಿ ಸೇರಿದ್ದಾರೆ. ಶಿವಸೇನಾದ ಉದಯ್ ಸಾಮಂತ್ ಹಾಗೂ ರಾಜೇಂದ್ರ ಗವಿತ್ ಜಯಗಳಿಸಿದ ಪ್ರಮುಖರಾಗಿದ್ದಾರೆ. ಎನ್‌ಸಿಪಿಯ ನವಾಬ್ ಮಲ್ಲಿಕ್ ಪರಾಭವಗೊಂಡಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು, ಸುದ್ದಿಗಾರರೊಂದಿಗೆ ಮಾತನಾಡಿ, ತಮ್ಮ ಪಕ್ಷ ಚುನಾವಣೆಯಲ್ಲಿ ಭರ್ಜರಿ ಜಯ ಸಾಧಿಸಿದ್ದು, ಇದಕ್ಕೆ ಮಹಾಯುತಿ ಮೈತ್ರಿಕೂಟ ಕಳೆದ ಎರಡೂವರೆ ವರ್ಷಗಳಲ್ಲಿ ಮಾಡಿದ ಉತ್ತಮ ಕೆಲಸಕ್ಕೆ ಜನತೆ ನೀಡಿದ ಮನ್ನಣೆಯಾಗಿದೆ. ಈ ವಿಜಯ, ಮೈತ್ರಿಕೂಟ ಸಮರ್ಪಣಾ ಮನೋಭಾವದಿಂದ ಮಾಡಿದ ಪ್ರಯತ್ನಕ್ಕೆ ಸಂದ ಪ್ರತಿಫಲವಾಗಿದೆ ಎಂದು ಹೇಳಿದ್ದಾರೆ. ಸಾರ್ವಜನಿಕ ಬೆಂಬಲಕ್ಕಾಗಿ ಅವರು, ಜನತೆಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಮಹಾಯುತಿ ಮೈತ್ರಿಕೂಟದ ನಾಯಕರು ಸದ್ಯದಲ್ಲೇ ಚರ್ಚಿಸಿ ಮುಂದಿನ ಮುಖ್ಯಮಂತ್ರಿ ಸ್ಥಾನದ ಬಗ್ಗೆ ನಿರ್ಧಾರ ಕೈಗೊಳ್ಳಿದ್ದಾರೆ ಎಂದು ಏಕನಾಥ್ ಶಿಂಧೆ ತಿಳಿಸಿದ್ದಾರೆ. ಜಾರ್ಖಂಡ್‌ನಲ್ಲಿ ಜೆಎಂಎಂ ನೇತೃತ್ವದ ಐಎನ್‌ಡಿಐಎ ಬ್ಲಾಕ್, ಸ್ಥಾನಗಳಿಕೆಯಲ್ಲಿ ಎನ್‌ಡಿಎಕ್ಕಿಂತ ಮುಂದಿದೆ. ಒಟ್ಟು ೮೧ ವಿಧಾನಸಭಾ ಕ್ಷೇತ್ರಗಳ ಪೈಕಿ ಜೆಎಂಎಂ ೩೧ ಸ್ಥಾನಗಳಲ್ಲಿ ವಿಜಯ ಸಾಧಿಸಿದೆ. ೩ ಕ್ಷೇತ್ರಗಳಲ್ಲಿ ಮುಂದಿದೆ. ಕಾಂಗ್ರೆಸ್ ೧೫ ಸ್ಥಾನ ಗೆದ್ದಿದ್ದು, ೧ ಮತಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಆರ್‌ಜೆಡಿ ೪ ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದು,

ಬಿಜೆಪಿ ೧೯ ಸ್ಥಾನಗಳನ್ನು ಗೆದ್ದುಕೊಂಡಿದ್ದು, ೨ ಮತಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಸಿಪಿಐ ೨, ಎಜೆಎಸ್‌ಯುಪಿ, ಎಲ್‌ಜೆಪಿವಿ, ಜೆಎಲ್‌ಕೆಎಮ್ ತಲಾ ಒಂದು ಗೆದ್ದುಕೊಂಡಿವೆ. ಚುನಾವಣೆಯಲ್ಲಿ ಗೆದ್ದ ಪ್ರಮುಖರಲ್ಲಿ ಜೆಎಂಎಂನ ಬಸಂತ್ ಸೊರೆ ಸೇರಿದ್ದಾರೆ.

ಮಹಾರಾಷ್ಟ್ರದ ೨೮೮ ಕ್ಷೇತ್ರಗಳಿಗೆ ಇದೇ ೨೦ ರಂದು ಒಂದೇ ಹಂತದಲ್ಲಿ ಚುನಾವಣೆ ನಡೆದಿತ್ತು. ಜಾರ್ಖಂಡ್ ವಿಧಾನಭೆಯ ೮೧ ಸ್ಥಾನಗಳಲ್ಲಿ ಈ ತಿಂಗಳ ೧೩ ಹಾಗೂ ೨೦ ರಂದು ಎರಡು ಹಂತಗಳಲ್ಲಿ ಮತದಾನ ನೆಡೆದಿತ್ತು.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು, ನಾಳೆ ಬೆಳಗ್ಗೆ ಆಕಾಶವಾಣಿಯಲ್ಲಿ ಪ್ರತಿ ತಿಂಗಳು ಪ್ರಸಾರವಾಗುವ ತಮ್ಮ ಜನಪ್ರಿಯ ’ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ದೇಶ ಮತ್ತು ವಿದೇಶಗಳಲ್ಲಿರುವ ಭಾರತೀಯರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಬೆಳಗ್ಗೆ ೧೧ ಗಂಟೆಗೆ ಈ ಕಾರ್ಯಕ್ರಮ ಪ್ರಸಾರವಾಗಲಿದ್ದು, ಇದು ಮನ್ ಕಿ ಬಾತ್‌ನ ೧೧೬ನೇ ಅವತರಣಿಕೆಯಾಗಿದೆ. ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳಲ್ಲಿ, ಆಕಾಶವಾಣಿ ಸುದ್ದಿ ಜಾಲತಾಣ, ಮೊಬೈಲ್ ಆಪ್ ಹಾಗೂ ಯೂಟ್ಯೂಬ್ ಚಾನಲ್‌ಗಳಲ್ಲೂ ಈ ಕಾರ್ಯಕ್ರಮ ಮೂಡಿಬರಲಿದೆ. ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯದ ಜಾಲತಾಣಗಳಲ್ಲೂ ಈ ಕಾರ್ಯಕ್ರಮ ಬಿತ್ತರಗೊಳ್ಳಲಿದೆ. ಹಿಂದಿ ಭಾಷೆಯ ಪ್ರಸಾರದ ನಂತರ ಪ್ರಾದೇಶಿಕ ಭಾಷೆಗಳಲ್ಲೂ ಈ ಕಾರ್ಯಕ್ರಮ ಮೂಡಿಬರಲಿದೆ.

<><*<><>*><>

ಗುರುತೇಗ್ ಬಹದ್ದೂರ್ ಅವರ ಸಂಸ್ಮರಣೆಯ ಹುತಾತ್ಮ ದಿನದ ಮುನ್ನಾ ದಿನವಾದ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಗುರುತೇಗ್ ಬಹದ್ದೂರ್ ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಗುರುತೇಗ್ ಬಹದ್ದೂರ್ ಅವರು ಧರ್ಮ ರಕ್ಷಣೆ ಹಾಗೂ ಮಾನವೀಯತೆಗಾಗಿ ತ್ಯಾಗ ಬಲಿದಾನ ಮಾಡಿದ್ದಾರೆ. ಅವರ ಉಪದೇಶ ಮತ್ತು ಆದರ್ಶಗಳನ್ನು ಜನತೆ ಅಳವಡಿಸಿಕೊಳ್ಳಬೇಕು ಎಂದು ರಾಷ್ಟ್ರಪತಿಯವರು ಸಂದೇಶದಲ್ಲಿ ತಿಳಿಸಿದ್ದಾರೆ.

<><*<><>*><>

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಪರ ಐತಿಹಾಸಿಕ ತೀರ್ಪು ನೀಡಿದ ಮಹಾರಾಷ್ಟ್ರ ಜನತೆಗೆ ಅದರಲ್ಲಿಯೂ ವಿಶೇಷವಾಗಿ ಯುವಜನತೆ ಹಾಗೂ ಮಹಿಳೆಯರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಜನರು ತೋರಿದ ಆತ್ಮೀಯತಿಗೆ ಸರಿಸಾಟಿ ಎಲ್ಲ ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯ ಹಾಗೂ ಉತ್ತಮ ಆಡಳಿತ, ಜಯ ಗಳಿಸಿದೆ ಎಂದು ತಿಳಿಸಿರುವ ಅವರು, ಮೈತ್ರಿಕೂಟ ಮಹಾರಾಷ್ಟ್ರದ ಅಭಿವೃದ್ಧಿ ಕಾರ್ಯ ಮುಂದುವರಿಸಲಿದೆ ಎಂದು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು, ಜಾರ್ಖಂಡ್ ಜನತೆಗೂ ಧನ್ಯವಾದ ತಿಳಿಸಿದ್ದಾರೆ. ರಾಜ್ಯದ ಜನತೆಯ ಹಿತಾಸಕ್ತಿ ವಿಚಾರವನ್ನು ಮುಂಚೂಣಿಗೆ ತರುವಲ್ಲಿ ಬಿಜೆಪಿ ಶ್ರಮಿಸಲಿದೆ ಎಂದು ಹೇಳಿದ್ದಾರೆ. ಜೆಎಂಎಂ ಮೈತ್ರಿಕೂಟದ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ. ವಿವಿಧ ರಾಜ್ಯಗಳಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳನ್ನು ಆಶೀರ್ವದಿಸಿರುವುದಕ್ಕಾಗಿ ಧನ್ಯವಾದ ಸೂಚಿಸಿದ್ದಾರೆ.

<><*<><>*><>

ಸಂಸತ್ತಿನ ಚಳಿಗಾಲದ ಅಧಿವೇಶನದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನಾಳೆ ಸರ್ವಪಕ್ಷಗಳ ಕರೆದಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಅಧಿವೇಶನದ ಸಂದರ್ಭದಲ್ಲಿ ಲೋಕಸಭೆ ಹಾಗೂ ರಾಜ್ಯ ಸಭೆಯ ಸುಗಮ ಕಲಾಪಗಳಿಗಾಗಿ ಸರ್ಕಾರ ವಿವಿಧ ರಾಜಕೀಯ ಪಕ್ಷಗಳಿಂದ ಬೆಂಬಲ ಕೋರಲಿದೆ. ಸಂಸತ್ತಿನ ಚಳಿಗಾಲದ ಅಧಿವೇಶನ ಸೋಮವಾರ ಆರಂಭವಾಗಲಿದ್ದು, ಡಿಸೆಂಬರ್ ೨೦ ರವರೆಗೆ ನಡೆಯಲಿದೆ. ಸಂವಿಧಾನ ದಿನದ ಅಂಗವಾಗಿ ಇದೇ ೨೬ ರಂದು ಸದನದ ಕಲಾಪ ಇರುವುದಿಲ್ಲ.

<><*<><>*><>

ಗೋವಾದಲ್ಲಿ ನಡೆದಿರುವ ೫೫ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ’ನಾಳೆಯ ಕ್ರಿಯಾತ್ಮಕ ಮನಸ್ಸುಗಳು’ ಸ್ಪರ್ಧೆಗೆ ಭಾರೀ ಉತ್ಸಾಹ ಕಂಡು ಬಂದಿದೆ. ೪೮ ತಾಸುಗಳ ಅವಧಿಯಲ್ಲಿ ಕಿರುಚಿತ್ರ ಒಂದನ್ನು ನಿರ್ಮಿಸುವುದು ಸ್ಪರ್ಧೆಯ ಪ್ರಮುಖ ಅಂಶವಾಗಿದ್ದು, ಇದರಲ್ಲಿ ೧೦೦ ಸ್ಪರ್ಧಿಗಳನ್ನು ಒಳಗೊಂಡ ೫ ತಂಡಗಳು ಭಾಗವಹಿಸಿದ್ದವು.

<><*><><>*<><>

ಸಹಕಾರಿ ರಂಗದ ಮೂಲಕ ರೈತರ ಜೀವನ ಗುಣಮಟ್ಟ ಸುಧಾರಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. ಅವರು, ನವದೆಹಲಿಯಲ್ಲಿಂದು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ೯೧ನೇ ಸಾಮಾನ್ಯ ಪರಿಷತ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಭಾರತವನ್ನು ಸ್ವಾವಲಂಬಿಯನ್ನಾಗಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಶ್ರಮಿಸುತ್ತಿದ್ದು, ಈ ನಿಟ್ಟಿನಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು. ನಿಗಮ ೬೦ ಸಾವಿರ ಕೋಟಿ ರೂಪಾಯಿಗೂ ಹೆಚ್ಚಿನ ಆರ್ಥಿಕ ಬೆಂಬಲವನ್ನು ರೈತರಿಗೆ ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

<><*><><>*<><>

ಈ ತಿಂಗಳ ೨೫ ರಂದು ಸಂವಿಧಾನ ದಿನಾಚರಣೆಯ ಸ್ಮರಣಾರ್ಥ ನವದೆಹಲಿಯಲ್ಲಿ ನಡೆಯಲಿರುವ ಪಾದಯಾತ್ರೆ ನೇತೃತ್ವವನ್ನು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸೂಖ್ ಮಾಂಡವೀಯ ವಹಿಸಲಿದ್ದಾರೆ. ಈ ಪಾದಯಾತ್ರೆಯು, ’ಮೇರಾ ಸಂವಿಧಾನ್’ ಮೇರಾ ಸ್ವಾಭಿಮಾನ್’ ಘೋಷವಾಕ್ಯದಡಿ ಭಾರತೀಯ ಸಂವಿಧಾನದ ಅಂಗೀಕಾರ ದಿನವನ್ನು ಆಚರಿಸುತ್ತದೆ.

<><*><><>*<><>

ರಾಜಧಾನಿ ದೆಹಲಿಯಲ್ಲಿ ಇಂದು ಮಧ್ಯಾಹ್ನ ರಾಷ್ಟ್ರ ವಾಯು ಗುಣಮಟ್ಟ ತೀವ್ರ ಸ್ವರೂಪದಲ್ಲಿತ್ತು. ಒಂದು ಗಂಟೆ ಸಮಯದಲ್ಲಿ ವಾಯು ಗುಣಮಟ್ಟ ಸೂಚ್ಯಂಕ ೪೨೩ ಇತ್ತು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ. ನೆರೆಯ ನಗರಗಳಾದ ನೋಯ್ಡಾ, ಗಾಜಿಯಾಬಾದ್ ಮತ್ತು ಗುರುಗ್ರಾಮಗಳಲ್ಲಿ ಗಾಳಿಯ ಗುಣಮಟ್ಟ ಅತ್ಯಂತ ಕಳಪೆ ವಿಭಾಗದಲ್ಲಿ ದಾಖಲಾಗಿದೆ.

<><*><><>*<><>

ಅರ್ಮೇನಿಯಾದ ಎರೆವಾನ್‌ದಲ್ಲಿ ನಡೆದ ವಿಶ್ವ ಮಿಲಿಟರಿ ಕುಸ್ತಿ ಪಂದ್ಯಾವಳಿಯಲ್ಲಿ ಭಾರತ ೭ ಪದಕ ಗೆದ್ದುಕೊಂಡಿದೆ. ೫ ಚಿನ್ನ, ೧ ಬೆಳ್ಳಿ, ೧ ಕಂಚು ಇದರಲ್ಲಿ ಸೇರಿವೆ. ಮಹಿಳೆಯರ ೭೬ ಕೆ.ಜಿ ವಿಭಾಗದಲ್ಲಿ ರಿತಿಕಾ ಹೂಡಾ ಹಾಗೂ ೫೫ ಕೆ.ಜಿ ವಿಭಾಗದಲ್ಲಿ ಜ್ಯೋತಿ ಸಿಹಾಗ್ ಮತ್ತು ಪುರುಷರ ೭೪ ಕೆ.ಜಿ ಫ್ರೀ ಸ್ಟೈಲ್ ವರ್ಗದಲ್ಲಿ ಜೈದೀಪ್ ಚಿನ್ನದ ಪದಕಗಳಿಗೆ ಭಾಜರಾಗಿದ್ದಾರೆ. ೭೦ ಕೆ.ಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ಸುಬೇದಾರ್ ಶರ್ವಾನ್ ರಜತ ಪದಕಕ್ಕೆ ಪಾತ್ರರಾಗಿದ್ದಾರೆ. ಪುರುಷರ ೫೭ ಕೆ.ಜಿ. ಫ್ರೀ ಸ್ಟೈಲ್ ವರ್ಗದಲ್ಲಿ ಶುಭಂ ಹಾಗೂ ೭೯ ಕೆ.ಜಿ ಫ್ರೀ ಸ್ಟೈಲ್‌ನಲ್ಲಿ ಚಂದರ್‌ಮೋಹನ್ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಮಹಿಳೆಯರ ೬೮ ಕೆ.ಜಿ ವಿಭಾಗದಲ್ಲಿ ಪ್ರಿಯಾಂಕಾ ಕಂಚಿನ ಪದಕ ಪಡೆದಿದ್ದಾರೆ. ಭಾರತದ ಮಹಿಳಾ ತಂಡ ಇದೇ ಮೊದಲ ಬಾರಿಗೆ ವಿಶ್ವ ಮಿಲಿಟರಿ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಂಡಿತ್ತು.

<><*><><>*<><>

ಆಸ್ಟ್ರೇಲಿಯಾದ ಪರ್ತ್‌ದಲ್ಲಿ ನಡೆದಿರುವ ಬಾರ್ಡರ್ ಗವಾಸ್ಕರ್ ಟ್ರೋಫಿ ಮೊದಲ ಟೆಸ್ಟ್ ಪಂದ್ಯದಲ್ಲಿ ಎರಡನೇ ದಿನವಾದ ಇಂದು ಭಾರತ, ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೆ ೧೭೨ ರನ್ ಮಾಡಿದೆ. ಪ್ರವಾಸಿ ಭಾರತಿ ತಂಡ, ಒಟ್ಟು ೨೧೮ ರನ್‌ಗಳ ಮುನ್ನಡೆ ಪಡೆದಂತಾಗಿದೆ. ದಿನದಾಟದ ಮುಕ್ತಾಯಕ್ಕೆ ಯಶಸ್ವಿ ಜೈಸ್ವಾಲ್ ೯೦ ಹಾಗೂ ಕೆ.ಎಲ್.ರಾಹುಲ್ ೬೨ ರನ್ ಮಾಡಿ ಆಟವಾಡುತ್ತಿದ್ದರು.

<><*><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*<><>

<><*><>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*<><>